ಪತ್ರಿಕೆ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE 12/3/2020

ಆಡಳಿತ, ಪ್ರತಿಪಕ್ಷ ನಾಯಕರಿಂದ ಒಬ್ಬರ ಮೇಲೊಬ್ಬರ ವಾಗ್ದಾಳಿ । ನಾಲ್ಕು ಬಾರಿ ಕಲಾಪ ಮುಂದೂಡಿಕೆ

# ಹಕ್ಕುಚ್ಯುತಿಯಲ್ಲಿಯೇ ಕಲಾಪ ಭಗ್ನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸದನದಲ್ಲಿ ಮೊದಲು ಯಾರು ಹಕ್ಕುಚ್ಯುತಿ ಮಂಡಿಸಬೇಕು ಎನ್ನುವ ವಿಚಾರದಲ್ಲಿಯೇ ವಿಧಾನಸಭೆಯ ಕಲಾಪ ಇಡೀ ದಿನ ವ್ಯರ್ಥವಾಗಿದೆ. ಕೊನೆಗೂ ಆಡಳಿತ-ಪ್ರತಿಪಕ್ಷದವರಿಬ್ಬರೂ ಹಕ್ಕುಚ್ಯುತಿ ಮಂಡಿಸದೇ, ವಾಗ್ವಾದಲ್ಲಿಯೇ ದಿನ ಕಳೆದರು.

ಸಂವಿಧಾನದ ಮೇಲೆ ನಡೆದ ವಿಶೇಷ ಚರ್ಚೆಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಸುಧಾಕರ್ ಅವರು ಮಾಜಿ ಸ್ಪೀಕರ್ ರಮೇಶ್ ಕುಮಾರ್ ಅವರ ಮೇಲೆ ಆರೋಪಿಸಿ, ಸಭಾಧ್ಯಕ್ಷ ಸ್ಥಾನಕ್ಕೆ ಚ್ಯುತಿ ತಂದಿದ್ದಾರೆ ಎಂದು ಕಾಂಗ್ರೆಸ್ ಹಕ್ಕುಚ್ಯುತಿಗೆ ಮುಂದಾದರೆ, ಇತ್ತ ಬಿಜೆಪಿ ರಮೇಶ್ ಕುಮಾರ್ ಸುಧಾಕರ್ ಅವರನ್ನು ಅವಾಚ್ಯ ಶಬ್ದದಿಂದ ನಿಂದಿಸಿ ಸದನಕ್ಕೆ ಅಗೌರವ ತೋರಿದ್ದಾರೆ ಎಂದು ಹಕ್ಕುಚ್ಯುತಿ ಮಂಡಿಸಲು ಮುಂದಾದರು. ಆದರೆ ಎರಡು ಕಡೆಯವರು ತಾವೇ ಮೊದಲು ಮಂಡಿಸಬೇಕು ಎನ್ನುವ ಹಠಕ್ಕೆ ಬಿದ್ದಿದ್ದರಿಂದ, ಬುಧವಾರ ಇಡೀ ದಿನ ವಿಧಾನಸಭೆಯಲ್ಲಿ ಭಾರಿ ಗದ್ದಲ ಏರ್ಪಟ್ಟಿತ್ತು.

ಆಡಳಿತ, ಪ್ರತಿಪಕ್ಷ ನಾಯಕರು ಬುಧವಾರದ ಸದನ ಆರಂಭವಾಗುತ್ತಿದ್ದಂತೆ ಒಬ್ಬರ ಮೇಲೊಬ್ಬರು ವಾಗ್ದಾಳಿ ನಡೆಸಿದರು. ಈ ಹಂತದಲ್ಲಿ ರಮೇಶ್ ಕುಮಾರ್‌ರನ್ನು ಸದನದಿಂದಲೇ ಅಮಾನತು ಮಾಡಬೇಕು ಎನ್ನುವ ಆಗ್ರಹ ಬಿಜೆಪಿಯಿಂದ ಬಂದಿದ್ದರಿಂದ, ಕಾಂಗ್ರೆಸ್ ನಾಯಕರು ಭಾರಿ ವಿರೋಧವ್ಯಕ್ತಪಡಿಸಿದರು. ಮಾಜಿ ಸ್ಪೀಕರ್ ವಿರುದ್ಧ ಅನಾವಶ್ಯಕವಾಗಿ ಟೀಕಿಸಿದ್ದು ಎಷ್ಟು ಸರಿ? ಇದು ಕೇವಲ ರಮೇಶ್‌ಕುಮಾರ್ ಹಕ್ಕು ಮಾತ್ರವಲ್ಲದೇ, ಇಡೀ ಸದನದ ಹಕ್ಕುಚ್ಯುತಿಯಾಗಿದೆ. ಆದ್ದರಿಂದ ಮೊದಲು ಸುಧಾಕರ್ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.



**ನಾಲ್ಕು ಬಾರಿ ಮುಂದೂಡಿಕೆ:** ಸಭೆ ಆರಂಭವಾಗುತ್ತಿದ್ದಂತೆ ರಮೇಶ್ ಕುಮಾರ್ ಅವರು ಸುಧಾರ್ ಅವರ ಕ್ಷಮೆಯಾಚಿಸಬೇಕು ಎಂದು ಸಚಿವ ಈಶ್ವರಪ್ಪ, ಸಿ.ಟಿ ರವಿ ಸೇರಿದಂತೆ ಆಡಳಿತ ಪಕ್ಷದ ಶಾಸಕರು ಆಗ್ರಹಿಸಿದರು. ಈ ವೇಳೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಉಭಯ ಕಡೆಯವರಿಂದಲೂ ತಮಗೆ ಹಕ್ಕುಚ್ಯುತಿ ನೋಟಿಸ್ ತಲುಪಿದೆ. ತಾವು ನಿಯಮಾವಳಿ ಪ್ರಕಾರ ಪ್ರಶ್ನೋತ್ತರ ಅವಧಿ ಮುಗಿದ ನಂತರ ಮಾತನಾಡಲು ಇಬ್ಬರಿಗೂ ಅವಕಾಶ ಮಾಡಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಬೆಳಗ್ಗೆ ಕಲಾಪ ಆರಂಭಗೊಳ್ಳುತ್ತಿದ್ದಂತೆ ಸಿದ್ದರಾಮಯ್ಯ ಅವರು ತಾವು ಸಲ್ಲಿಸಿರುವ ಹಕ್ಕುಚ್ಯುತಿ ನೋಟಿಸ್ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಬೇಕು ಎಂದು ಮನವಿ ಮಾಡಿದರು. ತಾವು ಹಿಂದಿನ ದಿನವೇ ನೋಟಿಸ್ ನೀಡಿದ್ದು, ತಮಗೆ ಈಗಲೇ ಮಾತನಾಡಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು. ಇದನ್ನು ಒಪ್ಪದ ಬಿಜೆಪಿ ಸದಸ್ಯರು ತಮ್ಮ ಪಟ್ಟು ಮುಂದುವರಿಸಿ, ಸದನದಿಂದ ಒಂದು ದಿನದ ಮಟ್ಟಿಗಾದರೂ ರಮೇಶ್ ಕುಮಾರ್ ಅವರನ್ನು ಅಮಾನತು ಮಾಡಬೇಕು ಎಂದು ಪುನರುಚ್ಚರಿಸಿದರು. ಎರಡೂ ಪಕ್ಷಗಳ ಸದಸ್ಯರ ಗದ್ದಲ ಮುಂದುವರಿದಾಗ ಸ್ಪೀಕರ್ ಕಲಾಪವನ್ನು 15 ನಿಮಿಷಗಳ ಕಾಲ ಮುಂದೂಡಿದರು. ನಂತರ 12.55ಕ್ಕೆ ಕಲಾಪ ಪುನಾರಂಭಗೊಂಡಾಗಲೂ ಸಿದ್ದರಾಮಯ್ಯ ಮಾತನಾಡಲು ಅವಕಾಶ ಕೋರಿದರು.

## ಸುಧಾಕರ್ ಬೆನ್ನಿಗೆ ವಲಸಿಗರು

ಇನ್ನು ಬುಧವಾರದ ಸದನದಲ್ಲಿ ಸಿದ್ದರಾಮಯ್ಯ ಅವರು ಹಕ್ಕುಚ್ಯುತಿ ಮಂಡಿಸುವ ಮೊದಲು ತಮ್ಮ ಭಾಷಣಕ್ಕೆ ಅವಕಾಶ ನೀಡಬೇಕು ಎನ್ನುವ ವಾದವನ್ನು ಮಂಡಿಸಿದರು. ಮಂಗಳವಾರ ನನ್ನ ಭಾಷಣ ಅರ್ಧಕ್ಕೆ ಮೊಟಕಾಗಿದೆ. ಆದ್ದರಿಂದ ಅದನ್ನು ಪೂರ್ಣಗೊಳಿಸಲು ಅವಕಾಶ ನೀಡಬೇಕು ಎಂದರು. ಆದರೆ ಅವರ ಭಾಷಣದಿಂದಲೇ ಹಕ್ಕುಚ್ಯುತಿ ಮಂಡಿಸುವ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಹಕ್ಕುಚ್ಯುತಿ ಬಳಿಕ ಮಾತನಾಡಲಿ ಎಂದು ಸಿದ್ದು ಹೇಳಿದರು. ಈ ವೇಳೆ ಸುಧಾಕರ್ ಅವರ ನೆರವಿಗೆ ವಲಸಿಗ ಸಚಿವರಾದ ರಮೇಶ್ ಜಾರಕಿಹೊಳಿ, ಬೈರತಿ ಬಸವರಾಜ್, ಗೋಪಾಲಯ್ಯ ನಿಂತರು.

## ಮಧ್ಯಾಹ್ನದ ಬಳಿಕ ಹಾಜರ್

ಮಂಗಳವಾರ ನಡೆದ ಘಟನೆ ಬಳಿಕ ಬುಧವಾರ ವಿಧಾನಸಭೆಯಲ್ಲಿ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಕಾಣಿಸಿಕೊಂಡಿರಲಿಲ್ಲ. ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಹೇಳಿದ್ದ ಅವರನ್ನು, ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ಪ್ರಮುಖ ನಾಯಕರು ಸಮಾಧಾನ ಪಡಿಸುವ ಪ್ರಯತ್ನ ಮಾಡಿದ್ದರು. ಆದರೆ ಇದಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಬಳಿಕ ಬುಧವಾರ ಮಧ್ಯಾಹ್ನ ವಿಧಾನಸಭೆಯ ಮೊಗಸಾಲೆಯಲ್ಲಿ ಕಾಣಿಸಿಕೊಂಡರು, ಸದನದೊಳಗೆ ಬಾರದೇ ತಮ್ಮ ಅಸಮಾಧಾನವನ್ನು ಹೊರಹಾಕಿದರು. ಬಿಜೆಪಿ ನಾಯಕರು ರಮೇಶ್ ಕುಮಾರ್ ಅವರ ಈ ನಡೆಯನ್ನು 'ಹಿಟ್ ಆ್ಯಂಡ್ ರನ್' ಎಂದು ಮೂದಲಿಸಿದರು.

> ಈಗಾಗಲೇ ಹಕ್ಕುಚ್ಯುತಿ ಮಂಡಿಸಲು ಸ್ಪೀಕರ್ ಅವಕಾಶ ನೀಡಿದ್ದಾರೆ. ಆದ್ದರಿಂದ ನನಗೆ ಮಾತನಾಡಲು ನೀಡಬೇಕು. ಒಂದು ವೇಳೆ ಸುಧಾಕರ್ ಮಾತಿದ್ದರೆ, ಪ್ರಸ್ತಾವನೆ ಬಳಿಕ ಒಂದು ಗಂಟೆ ಮಾತನಾಡಲಿ. ಸ್ಪೀಕರ್ ಹೇಳಿದರೂ ಕೇಳುವ ಪರಿಸ್ಥಿತಿಯಲ್ಲಿ ಆಡಳಿತ ನಡೆಸುವವರು ಇಲ್ಲ. ಇದು ಸ್ಪೀಕರ್ ಮಾಡಿದ ಅವಮಾನ
>
> **- ಸಿದ್ದರಾಮಯ್ಯ**, ಪ್ರತಿಪಕ್ಷ ನಾಯಕ

ಅದಕ್ಕೆ ಬಿಜೆಪಿ ಸದಸ್ಯರು ಒಪ್ಪದೆ ಗದ್ದಲ ಸೃಷ್ಟಿಸಿದರು. ಎರಡೂ ಪಕ್ಷಗಳ ಸದಸ್ಯರನ್ನು ಸಮಾಧಾನಪಡಿಸಲು ಸ್ಪೀಕರ್ ಪ್ರಯತ್ನಿಸಿದರಾದರೂ, ಅದು ಸಫಲವಾದ ಹಿನ್ನೆಲೆಯಲ್ಲಿ ಕಲಾಪವನ್ನು ಮಧ್ಯಾಹ್ನ ಮೂರು ಗಂಟೆಗೆ ಮುಂದೂಡಿದರು. ಬಳಿಕ ಸದನ ಸೇರಿದರೂ ಸಂಧಾನವಾಗದ ಹಿನ್ನಲೆಯಲ್ಲಿ ಸಭೆಯಲ್ಲಿ ಗುರುವಾರಕ್ಕೆ ಮುಂದೂಡಿದರು.

**ಸಂಧಾನ ವಿಫಲ:** ಆಡಳಿತ-ಪ್ರತಿಪಕ್ಷ ಶಾಸಕರು ತಮ್ಮ ಹಕ್ಕುಚ್ಯುತಿ ಮಂಡಿಸುವ ವಿಚಾರದಲ್ಲಿ ತಮ್ಮದೇಯಾದ ವಾದವನ್ನು ಮಂಡಿಸಿ ಗಲಾಟೆ ಆರಂಭಿಸಿದ್ದರಿಂದ, ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಆಡಳಿತ, ಪ್ರತಿಪಕ್ಷ ನಾಯಕರೊಂದಿಗೆ ಸಂಧಾನ ಸಭೆ ನಡೆಸಿದರು. ಬಳಿಕ ಪ್ರತ್ಯೇಕ ಸಭೆಯನ್ನು ನಡೆಸಿದರು. ಆದರೆ ಇದ್ಯಾವುದಕ್ಕೂ ಶಾಸಕರು ಬಗ್ಗದಿದ್ದಾಗ ಒಂದು ಕ್ಷಣ ಕಾಗೇರಿ ಅವರು ತಮ್ಮ ಅಸಹಾಯಕತೆಯನ್ನು ಹೊರ ಹಾಕಿದರು.